**ದಿನಾಂಕಃ 23-09-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರಿದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಆರ್ ವಿ ಆರ್ ವಕೀಲರಿಂದಃ**

4. 10 ನೇ ತಾರೀಖಿನ ಘಟನೆ ಕುರಿತು ನಾನು ಇತರೇ ಸಿಬ್ಬಂದಿಯವರಿಂದ ಹೇಳಿಕೆಗಳನ್ನು ಪಡೆದಿದ್ದೆನಾ ಎಂದರೆ ಸಂತೋಷ ದೇವಾಡಿಗ ಎಂಬ ಮೇಲ್ವಿಚಾರಕ ಇದ್ದ ಅವನ ಹೇಳಿಕೆ ಪಡೆದಿರುತ್ತೇನೆ. ಸಂತೋಷ ದೇವಾಡಿಗ ನೀಡಿರುವ ಹೇಳಿಕೆ ಮೇರೆಗೆ ಅರ್ಜಿದಾರನ ವಿರುದ್ಧ ಸಂಸ್ಥೆಯಿಂದ ಪ್ರಕರಣದಲ್ಲಿ ಪ್ರಶ್ನಿತ ಕ್ರಮ ಜರುಗಿಸಲಾಗಿದೆ ಎಂದರೆ ಹೌದು . ಆತನ ಹೇಳಿಕೆ ಬಿಟ್ಟು ಬೇರೆ ನೌಕರರ ಹೇಳಿಕೆಯನ್ನು ನಾನು ಪಡೆದಿಲ್ಲ. 10 ನೇ ತಾರೀಖು 3 ನೇ ಪಾಳಿಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ಎಂದು ನಾನು ಖುದ್ದು ನೋಡಿಲ್ಲ ಅದನ್ನು ಮೇಲ್ವಿಚಾರಕ ನೋಡಿದ್ದಾನೆ. ನಾನು ನನ್ನ ವರದಿಯನ್ನು 11 ನೇ ತಾರೀಖು ಬೆಳಿಗ್ಗೆ ಸಲ್ಲಿಸಿದ್ದೇನೆ. ನಮ್ಮ ಕಂಪನಿಯ ಮ್ಯಾನೇಜಮೆಂಟ್ ಗೆ ನೌಕರರನ್ನು ತೆಗೆದುಹಾಕುವ ನೇಮಕ ಮಾಡುವ ಅಧಿಕಾರ ಇದೆ ಎಂದರೆ ನನಗೆ ಗೊತ್ತಿಲ್ಲ. ನಿ.ಎಂ. 5 ರಲ್ಲಿ ನಾನು ಸಹಿ ಮಾಡಿದ್ದೇನೆ. ನಾನು ಸಹಿ ಮಾಡಲು ಆಡಳಿತ ಮಂಡಳಿಯಿಂದ ಆದೇಶ ಇದೆಯಾ ಎಂದರೆ ಇದೆ . ಆ ಆದೇಶವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ. ಆ ಆದೇಶವನ್ನು ನಾನು ನನ್ನ ಕಣ್ಣಿನಿಂದ ನೋಡಿಲ್ಲ. 13 ನೇ ತಾರೀಖು ನೀಡಿರುವ ಆರೋಪಣಾ ಪಟ್ಟಿಯಲ್ಲಿ ಮೇಲ್ವಿಚಾರಕ , ವ್ಯವಸ್ಥಾಪಕ ಹಾಗೂ production head ಮತ್ತು ಎಚ್ ಆರ್ ವಿಭಾಗದವರನ್ನು ಸಾಕ್ಷಿಗಳನ್ನಾಗಿ ನಮೂದಿಸಲಾಗಿದೆ . ನಿ.ಎಂ. 4 ರಲ್ಲಿ ಅವರನ್ನು ಸಾಕ್ಷಿಗಳನ್ನಾಗಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಎಂ. 4 ರ ಪ್ರಕಾರ ವಿಚಾರಣೆ ಮಾಡಿದ್ದೇವಾ ಎಂದರೆ ವಿಚಾರಣೆ ಮಾಡಿದ್ದೇನೆ. ಅರ್ಜಿದಾರನಿಗೆ ಆರೋಪಣಾ ಪಟ್ಟಿ ಜಾರಿ ಮಾಡಿದ ಮೇಲೆ ಸಾಕ್ಷಿಗಳ ವಿಚಾರಣೆಯನ್ನು ಮಾಡಿಲ್ಲ ಇಲಾಖಾ ವಿಚಾರಣೆಯನ್ನು ಆಡಳಿತ ಮಂಡಳಿಯಿಂದ ಮಾಡಲಾಗಿದೆ. ಆ ಸಂಬಂಧದ ವಿಚಾರಣಾ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ. ನಿ.ಎಂ. 4 ಆರೋಪಣಾ ಪಟ್ಟಿ ಅರ್ಜಿದಾರನಿಗೆ ಮುಟ್ಟಿರುವ ಬಗ್ಗೆ ದಾಖಲಾತಿ ಇದೆಯಾ ಎಂದು ಗೊತ್ತಿಲ್ಲ. ನಿ.ಎಂ. 4 ರಲ್ಲಿ ಮೂರು ದಿನದ ಒಳಗೆ ಉತ್ತರ ನೀಡಬೇಕು ಎಂದು ಹೇಳಲಾಗಿದೆ ಎಂದರೆ ಹೌದು . ದಿನಾಂಕ 15.09.2015 ರಂದು ನಿ.ಎಂ. 5 ಅನ್ನು ಅರ್ಜಿದಾರನಿಗೆ ಜಾರಿ ಮಾಡಲಾಗಿದೆ ಎಂದರೆ ಹೌದು . ನಾವು ಎಚ್ ಆರ್ ವಿಭಾಗದಿಂದ ಯಾವುದೇ ತನಿಖೆ ಮಾಡದೇ ನಿ.ಎಂ. 5 ಅನ್ನು ಅರ್ಜಿದಾರನಿಗೆ ಜಾರಿ ಮಾಡಿದ್ದೇವೆ ಎಂದರೆ

ಸರಿಯಲ್ಲ. ನಾವು ಅರ್ಜಿದಾರನ ವಿರುದ್ಧ ಯಾವುದೇ ಇಲಾಖಾ ತನಿಖೆ ಅಥವಾ ಇಲಾಖಾ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಸಂತೋಷ ದೇವಾಡಿಗನಿಂದ ಸುಳ್ಳು ಹೇಳಿಕೆ ಪಡೆದು ಅರ್ಜಿದಾರನನ್ನು ಕಾನೂನಿಗೆ ವಿರುದ್ಧವಾಗಿ ಸಂಸ್ಥೆಯ ನೌಕರಿಯಿಂದ ತೆಗೆದು ಹಾಕಿದ್ದೇವೆ ಎಂದರೆ ಸುಳ್ಳು . ಅರ್ಜಿದಾರ ಕಾರ್ಮಿಕರಿಗೆ ಸಿಗಬೇಕಾದ ಹಕ್ಕುಗಳನ್ನು ನೀಡಬೇಕು ಎಂದು ಅನೇಕ ಬಾರಿ ನನಗೆ ಅರ್ಜಿ ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ಆ ರೀತಿಯಾಗಿ ಅರ್ಜಿದಾರ ಕಾನೂನು ಬದ್ಧವಾಗಿ ಹಕ್ಕು ಸಾಧನೆ ಮಾಡುತ್ತಿದ್ದಾನೆ ಎಂಬ ಕಾರಣಕ್ಕಾಗಿ ಅವನ ವಿರುದ್ಧ ಸುಳ್ಳು ಅರ್ಜಿ ಪಡೆದು ಆರೋಪಣಾ ಪಟ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರ ನನಗೆ ಪ್ರಾಣ ಬೆದರಿಕೆ ಹಾಕಿದ ಬಗ್ಗೆ ನಾನು ಪೊಲೀಸ್ ನವರಿಗೆ ದೂರು ಕೊಟ್ಟಿಲ್ಲ. ಆ ಬಗ್ಗೆ ನಾನು ಯಾವುದೇ ಕೇಸು ಮಾಡಿರುವುದಿಲ್ಲ ಮತ್ತು ಕಾನೂನು ಕ್ರಮ ಜರುಗಿಸಿಲ್ಲ. ಅರ್ಜಿದಾರನಿಗೆ ಆರೋಪಣಾ ಪಟ್ಟಿ ತಯಾರಿಸಿದ ಮೇಲೆ ಅರ್ಜಿದಾರ ದಿನಾಂಕ 14.09.2015 ರವರೆಗೆ ನಮ್ಮ ಸಂಸ್ಥೆಯಲ್ಲಿ ನೌಕರಿ ಮಾಡಿದ್ದಾನೆ ಎಂದರೆ ಸರಿಯಲ್ಲ. ದಿನಾಂಕ 14.09.2015 ರವರೆಗೆ ಅರ್ಜಿದಾರ ನಮ್ಮ ಸಂಸ್ಥೆಯಲ್ಲಿ ನಿರಂತರವಾಗಿ ಕೆಲಸ ಮಾಡಿದ್ದಾನೆ ಎಂದರೆ ಸರಿಯಲ್ಲ. ನಾನು Divagi Transmission System Technology Pvt. Ltd. ನ ಆಡಳಿತ ಮಂಡಳಿಯ ಮಾತನ್ನು ಕೇಳಿಕೊಂಡು ಅರ್ಜಿದಾರನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಬೆಂಗಳೂರಿನಲ್ಲಿ ಸೋಲಾರ ಕರೋನಾ ಎನರ್ಜಿ ಪ್ರೈ ಲಿಮಿಟೆಡ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಎದುರುದಾರ ಕಂಪನಿಯವರು ನನಗೆ ಕರೆಯಿಸಿ ಸಾಕ್ಷ್ಯ ಹೇಳಲು ಈ ಪ್ರಕರಣದಲ್ಲಿ ಅಧಿಕಾರ ಪತ್ರ ಕೊಟ್ಟಿದ್ದಾರೆ ಎಂದರೆ ಹೌದು . ಅವರ ನಿರ್ದೇಶನದಂತೆ ನಾನು ಈಗ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಹೌದು .

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.